# ಜಿಂಬಾಬ್ವೆಯ ಮೋಗ್ಲಿ!



ಪ್ರವೀಣ ಕುಲಕರ್ಣಿ

ಸುಮ್ಮನೇ ಊಹಿಸಿಕೊಳ್ಳಿ. ಸೂರ್ಯನ ಕಿರಣಗಳೂ ಭೂಮಿಯನ್ನು ಸ್ಪರ್ಶಿಸಲು ದುಸ್ಸಾಧ್ಯವಾದ ದಟ್ಟಕಾಡು. ಸುಮಾರು ನಲವತ್ತು ಹುಲಿಗಳ ಆವಾಸಸ್ಥಾನ. ಚಿರತೆಗಳೂ ದೊಡ್ಡ ಪ್ರಮಾಣದಲ್ಲಿ ಓಡಾಡುವ ತಾಣ. ವಿಷಕಾರಿ ಹಾವುಗಳು, ಭಯಾನಕ ಮೊಸಳೆಗಳ ಬೀಡು. ಮೇಲಾಗಿ ಹಿಂಡು ಹಿಂಡು ಆನೆಗಳೂ ಉಂಟು. ಇಂತಹ ಪರಿಸರದಲ್ಲಿ ನೀವು ಏಕಾಂಗಿಯಾಗಿ ಒಂದೆರಡು ದಿನ ಕಳೆಯಲು ಸಾಧ್ಯವೇ? ಈ ಪ್ರಶ್ನೆ ಕೇಳಿಯೇ ಮೈ ಜುಮ್ ಎನ್ನುವುದು ಅಲ್ಲವೇ? ಆದರೆ, ಜಿಂಬಾಬ್ವೆಯ ಏಳು ವರ್ಷದ ಪೋರ ಇಂತಹ ಕಾಡಿನಲ್ಲಿ ಒಂದೆರಡು ದಿನವಲ್ಲ, ಐದು ದಿನ ಒಬ್ಬಂಟಿಯಾಗಿ ಕಳೆದು ಪವಾಡಸದೃಶ ರೀತಿಯಲ್ಲಿ ಜೀವಂತವಾಗಿ ಹೊರಬಂದಿದ್ದಾನೆ. ಹೀಗಾಗಿ ಜಗತ್ತು ಈಗ ಈ ಹುಡುಗನನ್ನು ‘ನಿಜ ಜೀವನದ ಮೋಗ್ಲಿ’ ಎಂದು ಹಾಡಿ ಹೊಗಳುತ್ತಿದೆ. ಹೌದು, ಟೀವಿ ಸರಣಿಯ ಮೋಗ್ಲಿಯಂತೆಯೇ ಕಾಡುಮೃಗಗಳ ಜತೆ ಸಹಜೀವನ ನಡೆಸಿ ಬಂದಿದ್ದಾನೆ ಈತ!

ಆಟ ಆಡುವಾಗ ಮನೆಯಿಂದ ದಾರಿ ತಪ್ಪಿ ದಟ್ಟಕಾಡಿನೊಳಗೆ ನುಗ್ಗಿದ ಟಿನೊಟೆಂಡ ಪುಡು ಎಂಬ ಬಾಲಕ 120 ಗಂಟೆಗಳವರೆಗೆ ಏಕಾಂಗಿಯಾಗಿ ಕಾಡಲ್ಲಿ ಕಳೆದು, ಬದುಕಿ ಬಂದ ಕಥೆ ಬಲು ರೋಚಕ. ಜಿಂಬಾಬ್ವೆಯ ಕಾಸ್ಸಿಸ್ವಾ ಸಮುದಾಯಕ್ಕೆ ಸೇರಿದ ಈ ಹುಡುಗ ಮಟುಸಡೋನ ರಾಷ್ಟ್ರೀಯ ಉದ್ಯಾನದಲ್ಲಿ ಕಳೆದುಹೋಗಿದ್ದ. ಮಟುಸಡೋನ ಕಾಡನ್ನು ‘ಕನ್ಯೆಕಾಡು’ ಎಂದೂ ಕರೆಯುವುದುಂಟು. ಆ ಕಾಡಿನಲ್ಲಿ ಮಾನವನ ಹೆಜ್ಜೆಗಳು ಅಷ್ಟಾಗಿ ಮೂಡದಿರುವುದೇ ಈ ಹೆಸರಿಗೆ ಕಾರಣ. ಕಾಡುಮೃಗಗಳ ನೆಲೆಯಾದ ಆ ದಟ್ಟಕಾಡಿನಲ್ಲಿ ನೆಮ್ಮದಿಯಿಂದ ವಿಶ್ರಾಂತಿ ಪಡೆಯಲು ಜಾಗವಾದರೂ ಎಲ್ಲಿ? ಕಲ್ಲುಹಾಸಿನ ಮೇಲೆಯೇ ಮಲಗಿ ನಿದ್ರಿಸಿದನಂತೆ. ಹುಲಿಗಳ ಗರ್ಜನೆಯ ಸದ್ದು ಅವನಿಗೆ ಮೇಲಿಂದ ಮೇಲೆ ಕೇಳಿಸುತ್ತಿತ್ತಂತೆ. ಆನೆಗಳ ಹಿಂಡು ಹತ್ತಿರದಲ್ಲೇ ಹಾದು ಹೋಗುವುದನ್ನೂ ನಾಲ್ಕಾರು ಬಾರಿ ಕಂಡನಂತೆ. ‘ಐದು ದಿನಗಳವರೆಗೆ ಊಟ–ತಿಂಡಿಗೆ ಏನು ಮಾಡಿದೆಯೋ ಮಾರಾಯ, ನಿನಗೆ ಕುಡಿಯಲು ನೀರಾದರೂ ಎಲ್ಲಿ ಸಿಕ್ಕಿತು’ ಎಂದು ಅವನನ್ನು ಹುಡುಕಿದ ಅರಣ್ಯ ಸಿಬ್ಬಂದಿ ಕೇಳಿದರೆ, ಆ ಹುಡುಗ ಕೊಟ್ಟ ಉತ್ತರ, ಆತ ಕಲಿತ ಬದುಕಿನ ಪಾಠಕ್ಕೆ ಕನ್ನಡಿ ಹಿಡಿಯುತ್ತಿತ್ತು: ‘ಕಾಡು ಹಣ್ಣುಗಳು ಹೇರಳವಾಗಿ ಸಿಕ್ಕವು. ಕಿತ್ತುಕೊಂಡು ತಿಂದೆ. ಒಣಗಿದ ನದಿ ಪಾತ್ರದಲ್ಲಿ ಒರತೆ ತೆಗೆದು ನೀರು ಕುಡಿದೆ’. ಬದುಕಲು ನಮಗೆ ಬೇಕಾಗಿರುವುದು ಇಂತಹ ಪಾಠಗಳೇ ಅಲ್ಲವೇ?

ಟಿನೊಟೆಂಡ ಹಾದಿತಪ್ಪಿ ಕಾಡಿನೊಳಗೆ ಸಿಲುಕಿ ಹಾಕಿಕೊಂಡಿರುವ ಅನುಮಾನ ಬಂದಮೇಲೆ ಜನರೇನೂ ಸುಮ್ಮನೆ ಕೂರಲಿಲ್ಲ. ಸಂಗೀತ ವಾದ್ಯಗಳನ್ನು ತೆಗೆದುಕೊಂಡು ನಿತ್ಯವೂ ಬೆಳಗಿನಿಂದ ಬೈಗಿನವರೆಗೆ, ಬೈಗಿನಿಂದ ಬೆಳಗಿನವರೆಗೆ ಸರತಿಯಲ್ಲಿ ಬಾರಿಸುತ್ತಾ ಊರಿನ ದಿಕ್ಕು ‘ತೋರಿಸುವ’ ಕೆಲಸವನ್ನು ಮಾಡಿದರು. ಆದರೆ, ಆ ಸದ್ದು ದಟ್ಟಕಾಡಿನೊಳಗೆ ಸಿಲುಕಿದ ಈ ಬಾಲಕನಿಗೆ ಕೇಳಬೇಕಲ್ಲ? ಕಾಡಿನಲ್ಲಿ ತಿರುಗಿ, ತಿರುಗಿ ಸುಸ್ತಾಗಿದ್ದ ಟಿನೊಟೆಂಡ, ಊರು ಸೇರುವ ಹಾದಿಗಾಗಿ ತಡಕಾಡುತ್ತಲೇ ಇದ್ದ. ಐದನೇ ದಿನ ತಾನಿದ್ದ ಕಾಡಿನಲ್ಲಿ ವಾಹನದ ಸದ್ದು ಕೇಳಿ, ಆ ಸದ್ದು ಕೇಳಿಬಂದ ಸ್ಥಳದತ್ತ ಆತ ಓಡೋಡಿ ಬಂದ. ಆದರೆ, ಅವನು ಬರುವಷ್ಟರಲ್ಲಿ ವಾಹನ ಮುಂದೆ ಹೋಗಿತ್ತು. ಅದರ ಗಾಲಿಯ ಗುರುತುಗಳು ಮಾತ್ರ ಅಲ್ಲಿ ಕಾಣುತ್ತಿದ್ದವು. ಏನೂ ತೋಚದೆ ಹತ್ತಿರದ ಕಲ್ಲುಹಾಸಿನ ಮೇಲೆ ಹೋಗಿ ಕುಳಿತುಕೊಂಡ. ಅಲ್ಲಿ ಹೋಗಿದ್ದು ಅರಣ್ಯ ಕಾವಲು ಸಿಬ್ಬಂದಿಯ ವಾಹನ. ವಾಪಸ್ ಬರುವಾಗ ಮಾನವನ ಪುಟ್ಟ ಪುಟ್ಟ ಹೆಜ್ಜೆ ಗುರುತುಗಳನ್ನು ವಾಹನದಲ್ಲಿದ್ದವರು ಗಮನಿಸಿದರು. ತಕ್ಷಣ ವಾಹನ ನಿಲ್ಲಿಸಿ ಹುಡುಕಾಡಿದರು. ಕಲ್ಲುಹಾಸಿನ ಮೇಲೆ ನಿತ್ರಾಣಗೊಂಡು ಕುಳಿತಿದ್ದ ಟಿನೊಟೆಂಡನನ್ನು ಪತ್ತೆ ಹಚ್ಚಿ ಕರೆತಂದರು. ಒಂದುವೇಳೆ ಅರಣ್ಯ ಕಾವಲು ಸಿಬ್ಬಂದಿಗೆ ಅವನೇನಾದರೂ ಅಂದು ಸಿಗದೇ ಹೋಗಿದ್ದರೆ ಪ್ರಾಯಶಃ ಅವನ ಬದುಕೇ ಮುಗಿದುಹೋಗುತ್ತಿತ್ತು. ದೇವರ ದಯೆ, ಊರ ಜನರ ಹಾರೈಕೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಧೃತಿಗೆಡದೆ ಧೈರ್ಯದಿಂದ ಹೊರಬರುವ ಅವಕಾಶಕ್ಕಾಗಿ ವಹಿಸಿದ ತಾಳ್ಮೆಯಿಂದಾಗಿ ಟಿನೊಟೆಂಡ ಬದುಕಿಬಂದ ಎಂದು ಸ್ಥಳೀಯ ಸಂಸದೆ ಹೇಳುತ್ತಾರೆ.

ಟಿನೊಟೆಂಡ, ಕಾಡಿನಲ್ಲಿ ಒಟ್ಟಾರೆ 30 ಮೈಲು (ಸುಮಾರು 50 ಕಿ.ಮೀ) ದೂರ ಅಲೆದಾಡಿದ್ದ. ಬರಪೀಡಿತ ಪ್ರದೇಶದ ಹಳ್ಳಿಯಿಂದ ಬಂದಿರುವ ಈ ಹುಡುಗ, ಕಾಡಿನಲ್ಲಿ ಒಬ್ಬಂಟಿಯಾಗಿ ಕಾಲ ಕಳೆಯುವಲ್ಲಿ ಸ್ಥಳೀಯ ಜ್ಞಾನವೂ ಆತನ ನೆರವಿಗೆ ಒದಗಿಬಂತು. ಈ ಪೋರನ ಸ್ಫೂರ್ತಿಯ ಕಥೆ ಕೇಳಿದ ಸಾಮಾಜಿಕ ಜಾಲತಾಣಿಗರು ಅವನನ್ನು ಹೊಗಳಿದ್ದೇ ಹೊಗಳಿದ್ದು. ‘ರೋಮಾಂಚನಕಾರಿ ಸಾಹಸ’, ‘ಈ ಹುಡುಗ ಶಾಲೆಗೆ ಹೋದಮೇಲೆ ಸ್ನೇಹಿತರಿಗೆ ಅದ್ಭುತವಾದ ಸಾಹಸದ ಕಥೆ ಹೇಳಬಹುದು’, ‘ಈ ಪೋರನಿಗೊಂದು ಶುಭಾಶಯ’ ಎಂದೆಲ್ಲ ಸಂದೇಶಗಳ ಮಹಾಪ್ರವಾಹವೇ ಹರಿದಾಡಿತು. ಆದರೆ, ತನ್ನ ಸಾಹಸದ ಮಹತ್ವ ಎಂತಹದ್ದು ಎಂಬುದನ್ನೂ ಅರಿಯದಷ್ಟು ಮುಗ್ಧ ವಯಸ್ಸು ಟಿನೊಟೆಂಡನದು. ಅಮ್ಮನ ತೋಳಿನಲ್ಲಿ, ಅಪ್ಪನ ಹೆಗಲ ಮೇಲೆ ಕುಳಿತು ಒಂದು ನಗೆ ಹೊರಸೂಸುವುದಷ್ಟೇ ಆತನಿಗೆ ಗೊತ್ತು. ಈ ಹುಡುಗನ ಸಾಹಸದ ಕಥೆ ಕೇಳಿ ಜಗತ್ತಿನ ಪ್ರಮುಖ ಟೀವಿ ಚಾನಲ್‌ಗಳ ವಾಹನಗಳು ಈತನ ಸಂದರ್ಶನಕ್ಕಾಗಿ ಜಿಂಬಾಬ್ವೆಯ ಕಾಡಂಚಿನ ಕುಗ್ರಾಮವನ್ನು ಹುಡುಕಿಕೊಂಡು ಬರುತ್ತಿವೆ!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65